ದಿ:27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿಸವಾಲು : ವಾದಿ ಪರ ಶ್ರೀ. ಬಿ.ಎಸ್.ಎನ್ ವಕೀಲರಿಂದ :

1. ನಾನು 5 ನೇ ತರಗತಿವರೆಗೂ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ವಾದಿ ಯಾವ ರೀತಿಯಾಗಿ ದಾವೆ ಹಾಕಿದ್ದಾರೆ ಎಂದು ನಾನು ವಾದ ಪತ್ರವನ್ನು ಓದಿಲ್ಲ. ವಾದಿ ಈ ದಾವೆಯಲ್ಲಿ ಏನೆಲ್ಲಾ ದಾಖಲೆಗಳನ್ನು ಹಾಕಿದ್ದಾರೆ ಎಂದು ನಾನು ಪರಿಶೀಲನೆ ಮಾಡಿದ್ದೇನೆ. ವಾದಿ ಈ ದಾವೆಯನ್ನು ಯಾವ ಕಾರಣಕ್ಕಾಗಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ ಅದನ್ನು ಅವರ ಬಳಿಯೇ ಕೇಳಬೇಕು.

2. ನಾನು 25 ವರ್ಷಗಳಿಂದ ಫ್ಯಾಬ್ರಿಕೇಷನ್ ವರ್ಕ್ ಮಾಡುತ್ತಿದ್ದೇನೆ. ನನ್ನ ವರ್ಕ್ ಶಾಪ್ ತಲಘಟ್ಟಪುರ, ಕನಕಪುರ ಮುಖ್ಯ ರಸ್ತೆಯ ಬಳಿ ಇದೆ. ಬೆನಕ ಸ್ಟೀಲ್ಸ್ ಎಂದರೆ ಫ್ಯಾಬ್ರಿಕೇಟೆಡ್ ವಸ್ತುಗಳನ್ನು ಮಾರಾಟ ಮಾಡುವ ಸಂಸ್ಥೆ. ಬೆನಕ ಸ್ಟೀಲ್ಸ್ ಅವರ ಬಳಿಯಿಂದ ವಸ್ತುಗಳನ್ನು ಖರೀದಿಸುವುದು ಮತ್ತು ತೆಗೆದುಕೊಳ್ಳುವುದು ಆ ರೀತಿಯಾಗಿ ವ್ಯವಹಾರ ಹಲವಾರು ವರ್ಷಗಳಿಂದ ಇದೆ ಎಂದರೆ ಸರಿ.

3. ಕ್ರಿಯೇಟಿವ್ ಸೈನ್ಸ್ ಅದರ ಪಾಲುದಾರರಾದ ಸುಷ್ಮ ಮತ್ತು ಇತರರಿಂದ ನಾನು ಫ್ಯಾಬ್ರಿಕೇಷನ್ ಕೆಲಸಕ್ಕಾಗಿ 1 ನೇ ವಾದಿಯ ಮೂಲಕ ಆರ್ಡರ್ ತೆಗೆದುಕೊಂಡಿದ್ದೇನೆ ಎಂದರೆ ಸಾಕ್ಷಿ ನಾನು ಸುಷ್ಮ ಅವರ ಮುಖಾಂತರ ಆರ್ಡರ್ ತೆಗೆದುಕೊಂಡಿದ್ದೇನೆ ಎಂದು

ನುಡಿಯುತ್ತಾರೆ. ನನಗೆ 1 ನೇ ವಾದಿಯ ಪರಿಚಯವಿತ್ತು. ಆರ್ಡರ್ ತೆಗೆದುಕೊಳ್ಳುವ ಸಂದರ್ಭದಲ್ಲಿ 1 ನೇ ವಾದಿ ಇದ್ದರು.

4. ಫ್ಯಾಬ್ರಿಕೇಷನ್ ವರ್ಕ್ ಗಾಗಿ ಕೊಟೇಷನ್ ತಯಾರು ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಬರೆಯಲು ಬರದ ಕಾರಣ 1 ನೇ ವಾದಿ ಅವರ ಕಚೇರಿಗೆ ಕರೆದುಕೊಂಡು ಹೋಗಿ ಕೊಟೇಷನ್ ಅನ್ನು ತಯಾರು ಮಾಡಿ ಬೆಲೆಯನ್ನು ಒಪ್ಪಿಕೊಂಡು ಕೆಲಸ ಪ್ರಾರಂಭಿಸಿ ಎಂದು ನನಗೆ ಹೇಳಿದ್ದರು. ಸದರಿ ಕೊಟೇಷನ್ ನ ಕಾಪಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಕೊಟೇಷನ್ ಗೆ ಯಾರೆಲ್ಲಾ ಸಹಿ ಹಾಕಿದ್ದಾರೆ ಎಂದು ತಿಳಿದುಕೂಂಡಿದ್ದೀರಾ ಎಂದರೆ ಸಾಕ್ಷಿ ಕೊಟೇಷನ್ ಗೆ ನಾನು ಹಾಗೂ ಶ್ರೀಶೈಲ ಮಾತ್ರ ಸಹಿ ಹಾಕಿದ್ದೇವೆ ಎಂದು ನುಡಿಯುತ್ತಾರೆ. ನಾನು ಹಾಜರು ಪಡಿಸಿದ ಕೊಟೇಷನ್ ನಲ್ಲಿ ನನ್ನ ಹಾಗೂ 1 ನೇ ವಾದಿಯ ಸಹಿ ಇದೆ. ನಾನು ಯಾವೆಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಹೇಳಿದಂತಹ ಕೊಟೇಷನ್ ಅನ್ನು ಈ ನ್ಯಾಯಾಲಯಕ್ಕಾಗಲೀ ಅಥವಾ ಬೇರೆ ಯಾವುದೇ ನ್ಯಾಯಾಲಯದ ಎದುರಾಗಲೀ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ಒಂದೊಂದು ವಸ್ತುಗಳ ಬೆಲೆ ಕೊಟೇಷನ್ ನಲ್ಲಿ ಬೇರೆ ಬೇರೆ ಬರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದ ಕೊಟೇಷನ್ ಕೇವಲ ಸಾಮಗ್ರಿಗಳಿಗೆ ಮಾತ್ರ ಅಲ್ಲ ಬದಲಾಗಿ ಸಾಮಗ್ರಿ ಹಾಗೂ ಕೂಲಿಯನ್ನು ಸಹ ಒಳಗೊಂಡಿರುತ್ತದೆ. ಒಂದು ತಿಂಗಳ ಒಳಗೆ

ಫ್ಯಾಬ್ರಿಕೇಷನ್ ವರ್ಕ್ ಮಾಡಿಕೊಡುತ್ತೇನೆ ಎಂದು ನಾನು ಒಪ್ಪಿಕೊಂಡಿದ್ದೆ. ಸಾಕ್ಷಿ ಮುಂದುವರಿದು 20 ದಿನಗಳಲ್ಲಿ ನಾನು ಮುಗಿಸಿದ್ದೇನೆ ಎಂದು ನುಡಿಯುತ್ತಾರೆ.

6. ನಾನು ದಿನಾಂಕ 20.07.2016 ರಂದು ಕೆಲಸಕ್ಕೆ ಆಫರ್ ನೀಡಿದ್ದು ನಾನು ಯಾವ ತಾರೀಖಿನ ಒಳಗೆ ಮುಗಿಸಿದ್ದೇನೆ ಎಂದು ನಾನು ಹೇಳಲಾಗುವುದಿಲ್ಲ. ನನ್ನ ಕೆಲಸ ಮುಗಿಸಿದ ನಂತರ ನಾನು ಲಿಖಿತವಾಗಿ ಸುಷ್ಮ ಅವರಿಗಾಗಲೀ ಅಥವಾ 1 ನೇ ವಾದಿಗಾಗಲೀ ಲಿಖಿತವಾಗಿ ತಿಳಿಸಿದ್ದೇನಾ ಎಂದರೆ ಸಾಕ್ಷಿ ಈ ಕೆಲಸ ಮುಗಿದ ನಂತರ ಬೇರೆ ಕೆಲಸ ಸಹ ಇದ್ದು ಆ ಕೆಲಸ ಮುಗಿದ ಬಳಿಕ ಹಣದ ಬಗ್ಗೆ ಮಾತುಕತೆ ಮಾಡೋಣ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಆ ರೀತಿಯಾಗಿ ಇನ್ನೊಂದು ಕೆಲಸದ ಬಗ್ಗೆ ಮತ್ತು ಸದರಿ ಕೆಲಸ ಮುಗಿದ ನಂತರ ಫೈನಲ್ ಬಿಲ್ ಮಾಡುವ ಬಗ್ಗೆ ನನ್ನ ತಕರಾರಿನಲ್ಲಾಗಲಿ ಅಥವಾ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿದ್ದೀನಾ ಎಂದರೆ ಸಾಕ್ಷಿ ಆ ರೀತಿಯಾಗಿ ಯಾರೂ ಕೇಳದ ಕಾರಣ ಹಾಕಿಲ್ಲ ಎಂದು ನುಡಿಯುತ್ತಾರೆ. ನನಗೆ ನೀಡಿದ ಎಲ್ಲಾ ಹಣವನ್ನು 1 ನೇ ವಾದಿ ಹಾಗೂ ಸುಷ್ಮ ಅವರು ಚೆಕ್ ಮುಖಾಂತರವೇ ನೀಡಿದ್ದರು. ಸಾಕ್ಷಿ ಮುಂದುವರಿದು ಎಲ್ಲಾ ಹಣವನ್ನು ಪಾವತಿಮಾಡಿಲ್ಲ ಎಂದು ನುಡಿಯುತ್ತಾರೆ.

7. ದಿನಾಂಕ 25.07.2016 ರಂದು 1 ನೇ ವಾದಿ ನನಗೆ ರೂ.1,00,000/-ಗಳ ಚೆಕ್ಕನ್ನು ನನ್ನ ಮುಖಾಂತರ ಬೆನಕ ಸ್ಟೀಲ್ಸ್ ರವರಿಗೆ

(2 ನೇ ವಾದಿ) ಅವರಿಗೆ ನೀಡಿದ್ದಾರಾ ಎಂದರೆ ಸರಿ. ದಿನಾಂಕ 27.07.2016 ರಂದು 1 ನೇ ವಾದಿ ನನಗೆ ಅವರ ಖಾತೆಯಿಂದ ರೂ.1,00,000/-ವನ್ನು ಚೆಕ್ ಮುಖಾಂತರ ನನಗೆ ನೀಡಿದ್ದು ಅದು ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ದಿನಾಂಕ 05.08.2016 ರಂದು 1 ನೇ ವಾದಿ ನನಗೆ ರೂ.1,00,000/-ಗಳ ಇನ್ನೊಂದು ಚೆಕನ್ನು ನೀಡಿದ್ದು ಅದೂ ಸಹ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ದಿನಾಂಕ 09.08.2016 ರಂದು ರೂ.50,000/-ಗಳ 2 ಚೆಕ್ಕುಗಳನ್ನು ನನಗೆ ನೀಡಿದ್ದು ಅದೂ ಸಹ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಆ ಬಗ್ಗೆ ನನಗೆ ಸಂಶಯ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ನನಗೆ ಒಂದು ಬ್ಯಾಂಕ್ ಖಾತೆ ಇದೆ. ದಿನಾಂಕ 24.08.2016 ರಂದೂ ಸಹ 1 ನೇ ವಾದಿ ನನಗೆ ರೂ.1,00,000/-ಗಳ ಒಂದು ಚೆಕನ್ನು ನನಗೆ ನೀಡಿದ್ದು ಅದೂ ಸಹ ನನ್ನ ಖಾತೆಗೆ ಜಮಾ ಆಗಿದೆ ಎಂದರೆ ಸಾಕ್ಷಿ 1 ನೇ ವಾದಿ ನನಗೆ ಚೆಕ್ ನೀಡಿದ್ದು ಸದರಿ ಚೆಕ್ಕು ಅಮಾನ್ಯ ಆಗಿದೆಯಾ ಎಂಬುದರ ಬಗ್ಗೆ ನನಗೆ ಸಂಶಯ ಇದೆ ಎಂದು ನುಡಿಯುತ್ತಾರೆ. ಅದೇ ದಿನ 1 ನೇ ವಾದಿ ರೂ.50,000/-ಗಳ ಇನ್ನೊಂದು ಚೆಕನ್ನು ನನಗೆ ನೀಡಿದ್ದಾರೆ ಎಂದರೆ ಸರಿ. 1 ನೇ ವಾದಿ ನನಗೆ ಯಾವಾಗೆಲ್ಲಾ ಚೆಕ್ಕುಗಳನ್ನು ನೀಡಿದ್ದಾರೋ ಸದರಿ ಎಲ್ಲಾ ಚೆಕ್ಕುಗಳಿಂದ ಹಣ ನನ್ನ ಖಾತೆಗೆ ವರ್ಗಾವಣೆಯಾಗಿದ್ದು ಅವುಗಳೆಲ್ಲಾ ಫ್ಯಾಬ್ರಿಕೇಷನ್ ಕೆಲಸಕ್ಕಾಗಿ ನೀಡಿದ ಚೆಕ್ಕುಗಳು ಎಂದರೆ ಸಾಕ್ಷಿ ನನಗೆ ಚೆಕ್ಕುಗಳನ್ನು ಮಾತ್ರ ವಾದಿ ನೀಡಿದ್ದು ಸದರಿ ಚೆಕ್ಕುಗಳ ಮುಖಾಂತರ ನನ್ನ ಖಾತೆಗೆ ಹಣ ವರ್ಗಾವಣೆಯಾಗಿದ್ದರೆ ನಾನು

ದಾವೆ ಹಾಕುವ ಪ್ರಮೇಯ ಬರುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿಯ ಕಡೆಯಿಂದ ನನಗೆ ಸಂಪೂರ್ಣ ಹಣ ಪಾವತಿಯಾದ ಕಾರಣ ನಾನು ಅವರ ವಿರುದ್ಧ ಚೆಕ್ ಅಮಾನ್ಯ ಪ್ರಕರಣಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ.

8. ನನ್ನ ಯೂನಿಯನ್ ಬ್ಯಾಂಕ್ ಖಾತೆಯ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ನಾನು ಪ್ರಯತ್ನ ಪಡುತ್ತೇನೆ ಎಂದು ನುಡಿಯುತ್ತಾರೆ. ವಾದಿ ತನ್ನ ವಾದ ಪತ್ರದಲ್ಲಿ ಚೆಕ್ಕುಗಳ ಮುಖಾಂತರ ನನಗೆ ಹಣ ಪಾವತಿ ಮಾಡಿದ್ದೇನೆ ಎಂದು ತಿಳಿಸಿದ ನಂತರ ನಾನು ಆ ಬಗ್ಗೆ ನನ್ನ ವಕೀಲರಿಗೆ ಸೂಚನೆ ನೀಡಿದ್ದೇನಾ ಮತ್ತು ಆ ಬಗ್ಗೆ ದಾಖಲೆಗಳನ್ನು ನೀಡಿದ್ದೇನಾ ಎಂದರೆ ಸಾಕ್ಷಿ ಸದರಿ ಹೇಳಿಕೆಗಳು ಸುಳ್ಳು ಎಂದು ನುಡಿಯುತ್ತಾರೆ.

9. ವಾದಿ ಹಾಕಿದ ವಾದ ಪತ್ರಕ್ಕೆ ನಾನು ಲಿಖಿತ ತಕರಾರು ಹಾಕಿದ್ದೇನೆ. ತಕರಾರು ಹಾಕುವ ಸಂದರ್ಭದಲ್ಲಿ ನಾನು ನನ್ನ ವಕೀಲರಿಗೆ ಬೇಕಾದ ಮಾಹಿತಿಗಳನ್ನು ಒದಗಿಸಿದ್ದೇನೆ. ವಿನಯ್ ಶ್ರೀಶೈಲ ಅವರು ನೀಡಿದ ಯಾವುದೇ ಚೆಕ್ಕುಗಳು ಅಮಾನ್ಯಗೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಫ್ಯಾಬ್ರಿಕೇಷನ್ ಕೆಲಸಗಳಿಗಾಗಿಯೇ 1 ನೇ ವಾದಿ ಬೆನಕ ಸ್ಟೀಲ್ಸ್ ಅವರಿಗೆ ಚೆಕ್ ಮುಖಾಂತರ ರೂ.3,50,000/- ಹಣವನ್ನು ಕೊಟ್ಟಿದ್ದಾರೆ ಎಂದರೆ ಸರಿ. 1 ನೇ ವಾದಿ ಫ್ಯಾಬ್ರಿಕೇಷನ್ ಕೆಲಸಕ್ಕಾಗಿ 2 ನೇ ಪ್ರತಿವಾದಿಗೆ ಹಣ ಪಾವತಿ ಮಾಡಿದ್ದರೂ ಸಹ ನಾನು 2 ತಿಂಗಳುಗಳ ನಂತರವೂ ಸಹ ಕೆಲಸ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

10. ನನ್ನ ವೈಯುಕ್ತಿಕ ತೊಂದರೆಗಳಿಗಾಗಿ ಈ ಹಣವನ್ನು ಪಡೆದುಕೊಂಡು ನಾನು ಕೆಲಸ ಮಾಡದೇ ಇದ್ದ ಕಾರಣ ನನಗೂ ಹಾಗೂ 1 ನೇ ವಾದಿಗೂ ವೈಮನಸ್ಸು ಬಂದಿತ್ತು ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ನಾನು ಕೆಲಸ ಸಂಪೂರ್ಣ ಮಾಡಿದ್ದಕ್ಕೆ ನ್ಯಾಯಾಲಯಕ್ಕೆ ಫೋಟೋಗಳನ್ನು ಹಾಕಿದ್ದೇನೆ ಎಂದು ನುಡಿಯುತ್ತಾರೆ.

11. ಬೆನಕ ಸ್ಟೀಲ್ಸ್ ಅವರಿಂದ ಯಾವ ಯಾವ ಸಾಮಗ್ರಿಗಳನ್ನು ಖರೀದಿಸಿದಕ್ಕಾಗಿ ಸಾಗಾಣಿಕಾ ಕೇಂದ್ರಕ್ಕಾಗಿ ಒಂದು ವೇ ಬಿಲ್ ಕೊಡುತ್ತಾರೆ ಎಂದರೆ ಸರಿ. ನಿ.ಪಿ.6 ಬೆನಕ ಸ್ಟೀಲ್ಸ್ ಅವರಿಂದ ಸಾಮಗ್ರಿಗಳನ್ನು ಖರೀದಿಸಿದಕ್ಕಾಗಿ ನೀಡಿದ ಬಿಲ್ ಎಂದರೆ ಸಾಕ್ಷಿ ಅದನ್ನು ವಾದಿ ಅವರ ಹೆಸರಿಗೆ ಹಾಕಿಸಿಕೊಂಡಿದ್ದಾರೆ ಮತ್ತು ಅದು ನನ್ನ ಹೆಸರಿನಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನಾನು ನಿ.ಪಿ.6 ರ ಬಿಲ್ಲಿನಲ್ಲಿ ಕ್ರಿಯೇಟಿವ್ ಸೈನ್ಸ್ ಅವರ ಹೆಸರಿನಲ್ಲಿ ಬೆನಕ ಸ್ಟೀಲ್ಸ್ ಅವರ ಕಡೆಯಿಂದ ಬಿಲ್ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಸದರಿ ಬಿಲ್ಲಿನಲ್ಲಿ ಯಾರಿಗೆ ಅದನ್ನು ಸಾಗಾಟ ಮಾಡುತ್ತಾರೆ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಯಾವಾಗಲ್ಲಾ ನಾವು ಬಿಲ್ಲುಗಳನ್ನು ಮಾಡುತ್ತೇವೋ ಆ ಸಂದರ್ಭದಲ್ಲಿ ನಾನು ರಿಸೀವ್ಡ್ ಎಂಬುದಾಗಿ ಸಹಿ ಹಾಕುತ್ತೇನೆ ಆದರೆ ನಿ.ಪಿ.6 ರಲ್ಲಿ ನನ್ನ ಸಹಿ ಇಲ್ಲ ಎಂದು ನುಡಿಯುತ್ತಾರೆ.

12. ನಿ.ಪಿ.8 ರಲ್ಲಿ ನಂ.76/4 ತಲಘಟ್ಟಪುರ ಎಂಬುದಾಗಿ ಉಲ್ಲೇಖವಿದ್ದು ಅದು ನನ್ನ ವರ್ಕ್ ಶಾಪ್ ಇರುವ ಸ್ಥಳ ಎಂದರೆ ಸರಿ. ನಿ.ಪಿ.6 ರಿಂದ 8 ರ ಬಿಲ್ಲುಗಳನ್ನು ಕ್ರಿಯೇಟಿವ್ ಸೈನ್ಸ್ ಅವರ ಕಡೆಯಿಂದ ಸಹಿ ಮಾಡಿಸಿಕೊಂಡು ನಾನೇ ವಾದಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಫ್ಯಾಬ್ರಿಕೇಷನ್ ವರ್ಕ್ ಗೆ ಬೇಕಾಂದಹ ಸಾಮಗ್ರಿಗಳನ್ನು ನಾನು ಎಲ್ಲಿಂದ ತೆಗೆದುಕೊಂಡಿದ್ದೇನೆ ಎಂದರೆ ಸಾಕ್ಷಿ ಬೆನಕ ಸ್ಟೀಲ್ಸ್ ಇಂದ ನಾವು ಕಬ್ಬಿಣವನ್ನು ಪಡೆದುಕೊಂಡಿದ್ದೇವೆ ಮತ್ತು ಉಳಿದಂತಹ ಸಾಮಗ್ರಿಗಳನ್ನು ನಾವು ಬೇರೆ ಕಡೆಯಿಂದ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ಯಾವುದೇ ಒಂದು ಬಿಲ್ಲನ್ನು ಮಾಡಬೇಕಾದರೆ ವೇ ಬಿಲ್, ಇ-ಸುಗಮ ಬಿಲ್ ಮತ್ತು ಪೇಮೆಂಟ್ ಆಗಿರುವ ಬಗ್ಗೆ ತೋರಿಸಬೇಕಾಗುತ್ತದೆ ಎಂದರೆ ಸಾಕ್ಷಿ ಅದನ್ನು ವಾದಿಯೇ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಬೆನಕ ಸ್ಟೀಲ್ಸ್ ಅವರ ಕಡೆಯಿಂದ ಯಾವೆಲ್ಲಾ ಸಾಮಗ್ರಿಗಳನ್ನು ಖರೀದಿಸಿದ್ದಾರೆ ಎಂದು ನಾನು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಬೆನಕ ಸ್ಟೀಲ್ಸ್ ಅವರ ಕಡೆಯಿಂದ ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ದಾಖಲೆಗಳು ಇಲ್ಲ ಮತ್ತು ಸದರಿ ವ್ಯವಹಾರಗಳು ನಿರಂತರವಾಗಿ ನಡೆಯುತ್ತಿರುತ್ತವೆ ಎಂದು ನುಡಿಯುತ್ತಾರೆ. ನಾನು ಬಿಲ್ ಮುಖಾಂತರ ಬೆನಕ ಸ್ಟೀಲ್ಸ್ ಅವರ

ಜೊತೆ ವ್ಯವಹಾರ ಮಾಡುತ್ತಿದ್ದರೂ ಆ ರೀತಿಯಾದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

13. ನಾನು ಪಫ್ ಶೀಟುಗಳನ್ನು ಹೊಸೂರು ರಸ್ತೆಯಿಂದ ಖರೀದಿಸಿದ್ದೇನೆ ಆದರೆ ಅಂಗಡಿಯ ಹೆಸರು ನೆನಪಿಲ್ಲ. ನಾನು ಜಿ.ಎಸ್.ಡಬ್ಲ್ಯೂ ಬ್ರ್ಯಾಂಡಿನ ಪಫ್ ಶೀಟುಗಳನ್ನು ಖರೀದಿಸಿದ್ದೇನೆ. ಆ ಬಗ್ಗೆ ಬಿಲ್ಲುಗಳು ನನ್ನ ಫ್ಯಾಕ್ಟರಿ ಹೆಸರಿನಲ್ಲಿವೆ. ನಾನು ಎಷ್ಟು ಅಳತೆಯ ಪಫ್ ಶೀಟುಗಳನ್ನು ಯಾವ ಬೆಲೆಗೆ ಖರೀದಿಸಿದ್ದೇನೆ ಎಂದರೆ ಸಾಕ್ಷಿ ರೂ.5,50,000/- ಬೆಲೆಯ ಶೀಟುಗಳನ್ನು ಖರೀದಿಸಿದ್ದೇನೆ ಎಂದು ನುಡಿಯುತ್ತಾರೆ. ಯಾವುದೇ ಒಬ್ಬ ವ್ಯಕ್ತಿ ಅವರ ಹೆಸರಿನಲ್ಲಿ ಸಾಮಗ್ರಿಗಳನ್ನು ಖರೀದಿಸಿದ್ದರೆ ಜಿ.ಎಸ್.ಟಿ ಬಿಲ್ ಸಹ ಬರುತ್ತದೆ ಎಂದರೆ ಸರಿ. ಅದೇ ರೀತಿ ಸದರಿ ಬಿಲ್ಲುಗಳಿಗೆ ಸಂಬಂಧಿಸಿದಂತೆ ವ್ಯಾಟ್ ಚಾರ್ಜುಗಳ ಸಹ ಬರುತ್ತಿದ್ದು ಅವುಗಳನ್ನೂ ಸಹ ನಾನು ಪಾವತಿ ಮಾಡಿದ್ದೇನೆ. ರೂ.5,50,000/-ದ ಪಫ್ ಶೀಟುಗಳನ್ನು ನಾನು 2016 ರಲ್ಲಿ ಖರೀದಿ ಮಾಡಿದ್ದೇನೆ ಎಂದು ತೋರಿಸಲು ನನಗೆ ಬಿಲ್ಲುಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಯಾವುದೇ ಪಫ್ ಶೀಟುಗಳನ್ನು ಎಲ್ಲಿಗೆ ಅಳವಡಿಸಬೇಕೋ ಅಲ್ಲಿಗೆ ತೆಗೆದುಕೊಳ್ಳುತ್ತೇವೆ ಎಂದರೆ ಸರಿ. ಪಫ್ ಶೀಟುಗಳನ್ನು ಡೆಲಿವರಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

14. ದಿನಾಂಕ 21.09.2016 ಹಾಗೂ 23.09.2016 ರಂದು 2 ಚೆಕ್ಕುಗಳನ್ನು 2 ಹಾಗೂ 3 ನೇ ವಾದಿಗಳು ಈ ಕೆಲಸ ಮುಗಿಸುವ ಪ್ರಯುಕ್ತವಾಗಿ ನನಗೆ ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಚೆಕ್ಕುಗಳು ಅಮಾನ್ಯಗೊಂಡಿವೆ ಎಂದು ನುಡಿಯುತ್ತಾರೆ. ನಾನು ಪಫ್ ಶೀಟುಗಳ ಕೆಲಸ ಮಾಡದ ಕಾರಣ ಕೆಲಸ ಸಂಪೂರ್ಣವಾಗುವವರೆಗೂ ಸದರಿ ಚೆಕ್ಕುಗಳನ್ನು ಮಾನ್ಯಗೊಳಿಸದಂತೆ ಸ್ಟಾಪ್ ಪೇಮೆಂಟ್ ನಿರ್ದೇಶನವನ್ನು 3 ನೇ ವಾದಿ ನನಗೆ ತಿಳಿಸಿಯೇ ಬ್ಯಾಂಕಿಗೆ ನಿರ್ದೇಶನವನ್ನು ನೀಡಿದ್ದರು ಎಂದರೆ ಸರಿಯಲ್ಲ. ಸ್ಟಾಪ್ ಪೇಮೆಂಟ್ ನಿರ್ದೇಶನವನ್ನು 3 ನೇ ವಾದಿ ನೀಡಿದ ಕಾರಣ ಸದರಿ ಚೆಕ್ಕುಗಳು ಅಮಾನ್ಯಗೊಂಡಿವೆ ಎಂದರೆ ಸರಿ. ನಾನು ವಹಿಸಿದ ಕೆಲಸವನ್ನು ಸಂಪೂರ್ಣವಾಗಿ ಮಾಡದ ಕಾರಣ ನನಗೂ ಹಾಗೂ ವಾದಿಗೂ ವೈಮನಸ್ಸು ಬಂದಿತ್ತು ಎಂದರೆ ಸಾಕ್ಷಿ ನಾನು ಸಂಪೂರ್ಣವಾಗಿ ಕೆಲಸ ಮಾಡಿದ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಚೆಕ್ ಬೌನ್ಸ್ ಆಗುವ ಮೊದಲು ನಾನು ನನ್ನ ಸಂಪೂರ್ಣ ಫ್ಯಾಬ್ರಿಕೇಷನ್ ವರ್ಕ್ ಹಾಗೂ ಪಫ್ ಶೀಟುಗಳ ವರ್ಕ್ ಆಗಿದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ.

15. ನನಗೆ ಖಾಯಂ ನೌಕರರು ಇದ್ದಾರೆ. ಪ್ರತಾಪ್, ಪ್ರಕಾಶ್. ಅರುಣ್, ಬ್ರಹ್ಮ, ಪವನ್, ಯೋಗೇಶ್, ಹಸನ್, ರಾಜು ಹಾಗೂ ಮಹೇಂದ್ರ ಎಂಬ ಕೆಲಸಗಾರರು ಇದ್ದಾರೆ. ನಾನು ಸದರಿ ಕೆಲಸಗಾರಿಗೆ

ತಿಂಗಳ ಸಂಬಳ ನೀಡುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ನಾನು ಅವರಿಗೆ ವಾರಕ್ಕೆ ಒಂದು ಬಾರಿ ಕೂಲಿ ಕೊಡುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕೆಲಸಗಾರರಿಗೆ ಕೂಲಿ ಪಾವತಿ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ. 2016 ರಲ್ಲಿ ನಾನು ನನ್ನ ಕೆಲಸಗಾರರಿಗೆ ಕೂಲಿ ಪಾವತಿ ಮಾಡುತ್ತಿದ್ದೇನೆ ಎಂದು ತೋರಿಸಲು ಅಕೌಂಟ್ ಪುಸ್ತಕಗಳನ್ನು ನಾನು ವಹಿಸಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯ ಇಲ್ಲ.

16. ಸೆಪ್ಟೆಂಬರ್ 2016 ರವರೆಗೆ ನಾನು ನನ್ನ ಫ್ಯಾಬ್ರಿಕೇಟಿಂಗ್ ಕೆಲಸಗಳನ್ನು ಸಂಪೂರ್ಣವಾಗಿ ಮಾಡದೇ ಇದ್ದ ಕಾರಣ ವಾದಿ ನನ್ನ ಬಳಿ ಕೆಲಸ ಮಾಡಲು ಬರುವುದೇ ಬೇಡ ಎಂದು ಹೇಳಿದ್ದರು ಎಂದರೆ ಸುಳ್ಳು. ಕೆಲಸ ಮಾಡಿದ ನಂತರವೇ ನಾನು ಚೆಕ್ ಮುಖಾಂತರ ಹಣ ಪಾವತಿ ಮಾಡುತ್ತೇನೆ ಎಂದು ವಾದಿ ಹೇಳಿದ್ದರು ಎಂದರೆ ಸುಳ್ಳು. ನಾನು ಇದೇ ರೀತಿಯಾಗಿ ಕೆಲಸ ವಹಿಸಿಕೊಂಡ ನಂತರ ಅರ್ಧ ಮಾತ್ರ ಮಾಡಿ ಉಳಿದಂತೆ ಅವರನ್ನು ಬ್ಲಾಕ್ ಮೇಲ್ ಮಾಡುವುದು ನನ್ನ ಅಭ್ಯಾಸ ಎಂದರೆ ಸರಿಯಲ್ಲ.

17. ನಿ.ಪಿ.17 ರ ಫೋಟೋಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿ.ಪಿ.17 ರಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ನನ್ನ ಕೆಲಸಗಾರರು ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಫೋಟೋಗಳಲ್ಲಿ ಕಾಣುತ್ತಿರುವ ವ್ಯಕ್ತಿಗಳು ನನ್ನ ಕೆಲಸಗಾರರೇ ಎಂದು

ನುಡಿಯುತ್ತಾರೆ. ನಿ.ಪಿ.17 ರ ಫೋಟೋಗಳಲ್ಲಿ ಕಾಣುತ್ತಿರುವ ಕೆಲಸಗಾರರು ಯಾರು ಎಂದು ನನಗೆ ಗೊತ್ತಿಲ್ಲ ಮತ್ತು ಅವರ ಹೆಸರು ನನಗೆ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿ ಅವರು ನನ್ನ ಕೆಲಸಗಾರರೇ ಎಂದು ನುಡಿಯುತ್ತಾರೆ. ನಿ.ಪಿ.17 ರ ಎಲ್ಲಾ ಫೋಟೋಗಳಲ್ಲಿ ಕಾಣುತ್ತಿರುವ ಯಾವುದೇ ಒಬ್ಬ ವ್ಯಕ್ತಿಯ ಹೆಸರು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಧಕ್ಕೆ ಬಿಟ್ಟ ಕೆಲಸಗಳನ್ನು ವಾದಿ ಬೇರೆಯವರ ಮುಖಾಂತರ ಮಾಡಿಸಿದ್ದಾರೆ ಎಂದರೆ ಸುಳ್ಳು. ಸದರಿ ಸ್ಥಳದಲ್ಲಿ ಕೆಲಸ ಕಾರ್ಯಗಳು ಮುಗಿದ ನಂತರ ದಿನಾಂಕ 07.11.2016 ರಂದು ನಾನು ಫೋಟೋಗಳನ್ನು ತೆಗೆದು ನಿ.ಡಿ.5 ರಿಂದ ನಿ.ಡಿ.22 ರವರೆಗೆ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸಾಕ್ಷಿ ನಾನೇ ಕೆಲಸವನ್ನು ಪೂರ್ತಿಗೊಳಿಸಿದ್ದೇನೆ ಎಂದು ನುಡಿಯುತ್ತಾರೆ. ದಿನಾಂಕ 07.11.2016 ರಂದು ನಾನು ನನ್ನ ವಕೀಲರನ್ನು ಕರೆದುಕೊಂಡು ಸೆಟಲ್ ಮೆಂಟಿಗೆ ಎಂದು ಹೋಗಿ ಫೋಟೋಗಳನ್ನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07.11.2016 ರಂದು ಸದರಿ ಫೋಟೋಗಳನ್ನು ತೆಗೆಯಲು ಮತ್ತು ವಾದಿಯ ಸ್ಥಳವನ್ನು ಪ್ರವೇಶಿಸಲು ನಾನು ವಾದಿಯ ಅನುಮತಿ ಪಡೆದುಕೊಂಡಿದ್ದೇನಾ ಎಂದರೆ ಸಾಕ್ಷಿ ವಾದಿ ನನ್ನನ್ನು ರಾಜಿಗಾಗಿ ಕರೆದಿದ್ದು ಆ ಸಂದರ್ಭದಲ್ಲಿ ಫೋಟೋಗಳನ್ನು ತೆಗೆಯಲಾಗಿದೆ ಎಂದು ನುಡಿಯುತ್ತಾರೆ.

18. ಚೆಕ್ ಬೌನ್ಸ್ ಆದ ನಂತರ ನಾನು ನನ್ನ ವಕೀಲರ ಮುಖಾಂತರ ದಿನಾಂಕ 22.10.2016 ರಂದು ನೋಟೀಸು ನೀಡಿದ್ದೇನೆ ಎಂದರೆ ಸರಿ. ವಾದಿಗಳು ಚೆಕ್ ನೀಡಿದ ಬಗ್ಗೆ ಒಪ್ಪಿಕೊಂಡ ಕಾರಣ ಅವರ ವಿರುದ್ಧವಾಗಿ ಕೇಸು ಆಗಿದೆ ಮತ್ತು ಅಪೀಲಿನಲ್ಲಿ ಡಿಪಾಸಿಟ್ ಮಾಡಿದ ಹಣವನ್ನು ನಾನು ವಿತ್ ಡ್ರಾ ಮಾಡಿದ್ದೇನೆ ಎಂದರೆ ಸರಿ. ನನಗೆ ಮೊದಲು ನೀಡಿದ 4 ಲಕ್ಷ, ಬೆನಕ ಸ್ಟೀಲ್ಸ್ ಅವರಿಗೆ ನೀಡಿದ ರೂ.3,50,000/-, ಆ ಬಳಿಕ ನೀಡಿದ ರೂ.2,30,000/- ಒಟ್ಟಾಗಿ ನಾನು ಫ್ಯಾಬ್ರಿಕೇಷನ್ ವರ್ಕ್‌ಗೆ ಒಪ್ಪಿಕೊಂಡ ಹಣಕ್ಕಿಂತ ರೂ.40,000/- ಹಣ ನನಗೆ ಜಾಸ್ತಿಯೇ ಬಂದಿದೆ ಎಂದರೆ ಸರಿಯಲ್ಲ.

19. ಚೆಕ್ ಬೌನ್ಸ್ ಕೇಸುಗಳು ನನ್ನ ಪರವಾಗಿ ಆದ ನಂತರ ನನಗೆ ಒಪ್ಪಿಕೊಂಡ ಹಣಕ್ಕಿಂತ ಹೆಚ್ಚಿನ ಹಣವೇ ಬಂದಿದ್ದರೂ ಸಹ ನಾನು ಕ್ರಿಯೇಟಿವ್ ಸೈನ್ಸ್ ಅವರ ವಿರುದ್ಧ ಒಂದು ಸ್ಮಾಲ್ ಕಾಸ್ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸುಳ್ಳು. ನಿ.ಡಿ.3 ರ ದಾಖಲೆ ನಾನು ಸ್ಮಾಲ್ ಕಾಸ್ ಪ್ರಕರಣ ದಾಖಲಿಸಿದ ಬಗ್ಗೆ ನಾನೇ ಹಾಜರುಪಡಿಸಿದ ದಾಖಲೆ ಎಂದರೆ ಸುಳ್ಳು.

(ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.